## ವಾರ್ಷಿಕ ದತ್ತಿನಿಧಿ ಪುಸ್ತಕ ಬಹುಮಾನಗಳಿಗಾಗಿ ಲೇಖಕಿಯರಿಂದ ಕೃತಿಗಳ ಆಹ್ವಾನ



**ಕಲೇಸಂ ದತ್ತಿನಿಧಿ ಪುಸ್ತಕ ಬಹುಮಾನಗಳು ಮತ್ತು ಅವುಗಳನ್ನು ನೀಡಬೇಕಾಗಿರುವ ವರ್ಷಗಳು (ಜನವರಿಯಿಂದ– ಡಿಸೆಂಬರ್‌ವರೆಗೆ ಪ್ರಕಟಗೊಂಡ ಕೃತಿಗಳು)**

1. ಕಾಕೋಳು ಸರೋಜಮ್ಮ (ಕಾದಂಬರಿ)– 2021, 2022
2. ಭಾಗ್ಯ ನಂಜಪ್ಪ (ವಿಜ್ಞಾನ ಸಾಹಿತ್ಯ) – 2021, 2022
3. ನಾಗರತ್ನ ಚಂದ್ರಶೇಖರ್ (ಲಲಿತ ಪ್ರಬಂಧ)– 2021, 2022
4. ಜಿ.ವಿ. ನಿರ್ಮಲ (ಭಾರತದ ಯಾವುದೇ ಭಾಷೆಯ ಅನುವಾದಿತ ಕಾದಂಬರಿ/ ಕಥಾ ಸಂಕಲನ/ ಜೀವನ ಚರಿತ್ರೆ) 2021, 2022.
5. ತ್ರಿವೇಣಿ ಸಾಹಿತ್ಯ ಪುರಸ್ಕಾರ (ಪ್ರಾಯೋಜಕರು– ಸುಧಾಮೂರ್ತಿ)– ಸಣ್ಣಕಥೆ/ ಕಾದಂಬರಿ–2021, 2022
6. ಕಮಲಾ ರಾಮಸ್ವಾಮಿ (ಪ್ರವಾಸ ಸಾಹಿತ್ಯ)–2021, 2022
7. ನುಗ್ಗೇಹಳ್ಳಿ ಪಂಕಜ (ಹಾಸ್ಯಕೃತಿ)–2021, 2022

8. ಗುಣಸಾಗರಿ ನಾಗರಾಜ್ (ಮಕ್ಕಳ ಸಾಹಿತ್ಯ)–2021, 2022

9. ಇಂದಿರಾ ವಾಣಿರಾವ್ (ನಾಟಕ)– 2021, 2022

10. ಜಯಮ್ಮ ಕರಿಯಣ್ಣ (ಸಂಶೋಧನೆ)– 2021, 2022

11. ತ್ರಿವೇಣಿ ದತ್ತಿನಿಧಿ (ಕಥೆ/ ಕಾದಂಬರಿ– ಪ್ರಥಮ, ದ್ವಿತೀಯ, ತೃತೀಯ)– 2021, 2022

12. ಉಷಾ. ಪಿ.ರೈ (ಆತ್ಮಕಥೆ / ಸ್ಮೃತಿ ಚಿತ್ರ ಲೇಖನಗಳು)– 2022

13. ನಿರುಪಮಾ (ಕಥಾ ಸ್ಪರ್ಧೆ)

ಅ. ಪತ್ರಿಕಾ ಮಾಧ್ಯಮದಲ್ಲಿ ಮುದ್ರಣವಾದ ಕತೆ (2022–2023)

ಆ. ಡಿಜಿಟಲ್ ಮಾಧ್ಯಮದಲ್ಲಿ ಪ್ರಕಟಗೊಂಡ ಕತೆ (2022– 2023)

**ಎಚ್. ವಿ. ಸಾವಿತ್ರಮ್ಮ ಪ್ರಶಸ್ತಿ**

(ಕಥಾಸಂಕಲನ/ ಅನುವಾದ/ ಕಾದಂಬರಿ)

2020ನೇ ಸಾಲಿಗೆ ಕಥಾಸಂಕಲನ,
2021ನೇ ಸಾಲಿಗೆ ಅನುವಾದ ಸಾಹಿತ್ಯ,
2022ನೇ ಸಾಲಿಗೆ ಕಾದಂಬರಿಗಳನ್ನು
ಈ ಮೂರು ಪ್ರಕಾರಗಳಿಗೆ ಲೇಖಕಿಯರಿಂದ ಕೃತಿಗಳನ್ನು ಆಹ್ವಾನಿಸಲಾಗಿದೆ.
ಗಮನಿಸಿ– ಯಾವುದೇ ಭಾಷೆಯಿಂದ ಕನ್ನಡಕ್ಕೆ ಅನುವಾದಗೊಂಡ ಕೃತಿಯಾಗಿರಬೇಕು.
ತೀರ್ಪುಗಾರರ ತೀರ್ಪೇ ಅಂತಿಮವಾಗಿರುತ್ತದೆ.

## ಗಮನಿಸಿ

ಪ್ರಶಸ್ತಿಗಾಗಿ ಕಳುಹಿಸುವ ಕೃತಿಗಳನ್ನು
ದಿನಾಂಕ: 06–07–2023ರ ಒಳಗೆ ಕಲೇಸಂ
ಕಚೇರಿಗೆ ತಲುಪುವಂತೆ ಕಳುಹಿಸಲು ಸೂಚಿಸಿದೆ.

**ನಿಯಮಗಳು:**

* ದತ್ತಿ ಬಹುಮಾನಕ್ಕಾಗಿ ಲೇಖಕಿಯರು, ಪ್ರಕಾಶಕರು ಹಾಗೂ ಸಾಹಿತ್ಯಾಸಕ್ತರು ಮೇಲೆ ಸೂಚಿಸಿರುವ ಯಾವುದೇ ಪ್ರಕಾರಗಳಿಗೆ ಕೃತಿಗಳನ್ನು ಕಳುಹಿಸಬಹುದು.. ಬಹುಮಾನಕ್ಕಾಗಿ ಕಳುಹಿಸುವ ಕೃತಿಗಳೊಂದಿಗೆ ಈ ಕೆಳಕಂಡ ವಿವರಗಳನ್ನುಳ್ಳ ಪತ್ರವನ್ನು ಕಳುಹಿಸಬೇಕು.

* ಲೇಖಕಿಯ ಹೆಸರು, ಅಂಚೆ ವಿಳಾಸ, ಫೋನ್ ನಂ, ವಾಟ್ಸಾಪ್ ನಂ, ಇಮೇಲ್ ವಿಳಾಸ, ಕೃತಿ ಶೀರ್ಷಿಕೆ, ಪ್ರಕಟಣೆ ವರ್ಷ, ದತ್ತಿನಿಧಿ ಬಹುಮಾನದ ಹೆಸರು ಇರತಕ್ಕದ್ದು.

* ಕೃತಿಗಳ ಮೇಲೆ ಆಯಾ ದತ್ತಿನಿಧಿಯ ಹೆಸರು ಬರೆಯಬೇಕು.

* ಲೇಖಕಿಯರು ತಮ್ಮ 3 ಕೃತಿಗಳನ್ನು ಕಳುಹಿಸಬೇಕು.

* ಈಗಾಗಲೇ ಎರಡು ಪುಸ್ತಕ ಬಹುಮಾನ ಪಡೆದ ಲೇಖಕರ ಕೃತಿಗಳನ್ನು ಬಹುಮಾನಕ್ಕಾಗಿ ಪರಿಗಣಿಸಲಾಗುವುದಿಲ್ಲ.

* ಕರ್ನಾಟಕ ಲೇಖಕಿಯರ ಸಂಘದ ಹಾಲಿ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರ ಕೃತಿಗಳನ್ನು ಬಹುಮಾನಕ್ಕೆ ಪರಿಗಣಿಸುವುದಿಲ್ಲ.

* ಸಂಪಾದಿತ ಕೃತಿಗಳನ್ನು ಹಾಗೂ ಪಿ.ಎಚ್.ಡಿ ಪ್ರಬಂಧಗಳನ್ನು ಬಹುಮಾನಕ್ಕಾಗಿ ಪರಿಗಣಿಸಲಾಗುವುದಿಲ್ಲ

* ಬಹುಮಾನಕ್ಕಾಗಿ ಲೇಖಕಿಯರ ಕೃತಿಗಳನ್ನು ಮಾತ್ರ ಪರಿಗಣಿಸಲಾಗುವುದು ಮತ್ತು ಕೃತಿಯ ಪ್ರಥಮ ಆವೃತ್ತಿಯನ್ನು ಮಾತ್ರ ಪರಿಗಣಿಸಲಾಗುವುದು.

* ಪ್ರತಿ ಪುಸ್ತಕ ಬಹುಮಾನ ಆಯ್ಕೆ ಸಮಿತಿಯಲ್ಲಿ ಮೂವರು ಖ್ಯಾತ ಸಾಹಿತಿಗಳು ಇರುತ್ತಾರೆ. ಅವರ ನೀಡಿದ ತೀರ್ಪಿನ ಪ್ರಕಾರ ಕೃತಿಯನ್ನು ಬಹುಮಾನಕ್ಕಾಗಿ ಪರಿಗಣಿಸಲಾಗುವುದು.

* ದಯವಿಟ್ಟು ಕೃತಿಗಳನ್ನು ದಿನಾಂಕ. **06–7–2023ರ** ಒಳಗೆ ಮೊದಲು ತಲುಪುವಂತೆ ಈ ಕೆಳಕಂಡ ವಿಳಾಸಕ್ಕೆ ಕಳುಹಿಸುವುದು. ತಡವಾಗಿ ಬಂದ ಕೃತಿಗಳನ್ನು ಪರಿಗಣಿಸಲಾಗುವುದಿಲ್ಲ.

* ಕರ್ನಾಟಕ ಲೇಖಕಿಯರ ಸಂಘ ದತ್ತಿನಿಧಿ ಪುಸ್ತಕ ಬಹುಮಾನ ವಿತರಣೆ ಸಮಾರಂಭದಲ್ಲಿ ಬಹುಮಾನ ಪಡೆದ ಕೃತಿಗಳ ಲೇಖಕಿಯರನ್ನು ಗೌರವಿಸಿ ಬಹುಮಾನ ನೀಡಲಾಗುವುದು.

**ಕೃತಿ ತಲುಪಬೇಕಾದ ವಿಳಾಸ:** ಕರ್ನಾಟಕ ಲೇಖಕಿಯರ ಸಂಘ (ರಿ.) ಬೆಂಗಳೂರು 206, 2ನೇ ಮಹಡಿ, ವಿಜಯ ಮ್ಯಾನ್‌ಶನ್, 2ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು – 560 018 .

## ಸಮಗ್ರ ಸಾಧನೆಗಾಗಿ ಕೊಡುವ ಪ್ರಶಸ್ತಿಗಳು ಮತ್ತು ಅವುಗಳನ್ನು ನೀಡಬೇಕಾಗಿರುವ ವರ್ಷಗಳು

1. ಕೆ.ಟಿ. ಬನಶಂಕರಮ್ಮ (ಶಿಕ್ಷಕಿಯಾಗಿದ್ದು ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರಬೇಕು)– 2020, 2021, 2022
2. ಎಚ್. ಎಸ್. ಪಾರ್ವತಿ (ವಿಚಾರ/ ವಿಮರ್ಶೆ/ ಸಂಶೋಧನೆ)– 2022
3. ಇಂದಿರಾ ರತ್ನ (ಲೇಖಕಿಯಾಗಿದ್ದು ಕನ್ನಡಪರ ಸಂಘಟನೆಗಳಲ್ಲಿ ತೊಡಗಿಸಿಕೊಂಡಿರಬೇಕು)– ಬಾಕಿಯಿರುವುದಿಲ್ಲ
4. ಶ್ರೀಲೇಖಾ (ಭಾಷಾಂತರ ಸಾಹಿತ್ಯ)– 2021, 2022
5. ಪ್ರೇಮಭಟ್ (ಕಥಾ ಸಂಕಲನ ಪ್ರಶಸ್ತಿ) 2020, 2021, 2022
6. ವರ್ಷದ ಲೇಖಕಿ, ಅಂಕಿತ ಪ್ರಕಾಶನ (ಕನಿಷ್ಠ ಹತ್ತು ಮೌಲಿಕ ಪುಸ್ತಕ ಪ್ರಕಟಿಸಿದ ಲೇಖಕಿ)– 2022
7. ನಾಗಮಣಿ. ಎಸ್.ರಾವ್ (ಪತ್ರಿಕೋದ್ಯಮ) 2022

ಅ. ಸಮಕಾಲೀನ ವಿಷಯವೊಂದನ್ನು ಕುರಿತು ಪತ್ರಕರ್ತರಿಂದ ಉಪನ್ಯಾಸ (ಲೇಖಕಿ/ ಲೇಖಕ)

ಆ. ಪತ್ರಕರ್ತೆಯೊಬ್ಬರ ಸಾಧನೆಗಾಗಿ ಪ್ರಶಸ್ತಿ

## ಅನುಪಮ ಪ್ರಶಸ್ತಿಗೆ ಹೆಸರು ಸೂಚಿಸಿ

ಖ್ಯಾತ ಲೇಖಕಿ, ವೈದ್ಯೆ ದಿವಂಗತ ಡಾ. ಅನುಪಮಾ ನಿರಂಜನ ದತ್ತಿಯಿಂದ ಸ್ಥಾಪಿಸಲಾಗಿರುವ 'ಅನುಪಮಾ ಪ್ರಶಸ್ತಿ'ಯನ್ನು ಪ್ರತಿವರ್ಷ ಕನ್ನಡದ ಪ್ರಮುಖ ಲೇಖಕಿಯೊಬ್ಬರಿಗೆ ನೀಡಿ ಗೌರವಿಸಲಾಗುವುದು.

ಪ್ರಶಸ್ತಿಯನ್ನು ದತ್ತಿನಿಧಿ 1,00,000/- ರೂ. ಗಳಿಂದ ಬರುವ ಬಡ್ಡಿಯಿಂದ ಮಾತ್ರ ನೀಡಲಾಗುತ್ತಿದ್ದು ಯಾರಾದರೂ ಆಸಕ್ತರು ಈ ಮೊತ್ತವನ್ನು ಹೆಚ್ಚಿಸುವಲ್ಲಿ ಉದಾರವಾದ ಧನಸಹಾಯ ಮಾಡಿದರೆ ಅವರನ್ನು ಸ್ವಾಗತಿಸಲಾಗುತ್ತದೆ.

ಈ ಪ್ರಶಸ್ತಿಗೆ ಅರ್ಹವೆನಿಸುವ ಕನ್ನಡದ ಕೃತಿ ಹಾಗೂ ಕೃತಿಕಾರರ ಹೆಸರನ್ನು ಸೂಚಿಸಬೇಕಾಗಿ ವಿನಂತಿ. ಪ್ರಶಸ್ತಿಯ ಆಯ್ಕೆಗೆ ಹೆಸರು ಸೂಚಿಸುವಾಗ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳುವುದು ಅಗತ್ಯ. ಪ್ರಶಸ್ತಿಗೆ ಅರ್ಹವೆನಿಸುವ ಕೃತಿಯು ಹತ್ತು ವರ್ಷಗಳ ಈಚೆಗಿನ ಅವಧಿಯಲ್ಲಿ ಪ್ರಕಟವಾಗಿರಬೇಕು. ಅಲ್ಲದೆ ಪ್ರಥಮ ಆವೃತ್ತಿಯಾಗಿ ಪ್ರಕಟವಾದ ಕೃತಿಗಳನ್ನು ಮಾತ್ರ ಪ್ರಶಸ್ತಿಗೆ ಪರಿಗಣಿಸಲಾಗುವುದು. ಪ್ರಶಸ್ತಿಗೆ ಸೂಚಿಸುವ ಕೃತಿಯು ಸೃಜನಶೀಲ ಸಾಹಿತ್ಯ ಕೃತಿಯಾಗಲಿ ಅಥವಾ ಸೃಜನೇತರ ಕೃತಿಯಾಗಲೀ ಆಗಿರಬಹುದು. ಆದರೆ ಭಾಷಾಂತರ, ರೂಪಾಂತರ, ಸಂಪಾದಿತ ಅಥವಾ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧವಾಗಿರಬಾರದು.

ಇದು ಮರಣೋತ್ತರ ಪ್ರಶಸ್ತಿಯಲ್ಲ. ಪ್ರಶಸ್ತಿಗಾಗಿ ಸೂಚಿಸುವ ಕೃತಿಯ ಶ್ರೇಷ್ಠತೆಯ ಜೊತೆಗೆ ಲೇಖಕಿಯು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಒಟ್ಟು ಕೊಡುಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡಿರಬೇಕಾದ್ದು ಅತ್ಯಂತ ಅವಶ್ಯಕವಾದ ಅಂಶವಾಗಿದೆ. ಈ ಬಗ್ಗೆಯೂ ಮಾಹಿತಿ ನೀಡಬೇಕು.

ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಒಬ್ಬ ಲೇಖಕಿಯ ಹೆಸರನ್ನು ಹಾಗೂ ಪ್ರಶಸ್ತಿಗೆ ಅರ್ಹವೆನಿಸುವ ಅವರ ಒಂದು ಕೃತಿಯನ್ನು ಸೂಚಿಸಬೇಕಾಗಿ ವಿನಂತಿ. ತಮ್ಮ ಸೂಚನೆಯನ್ನು ಸಂಘದ ವಿಳಾಸಕ್ಕೆ, ಅಂಚೆ ಮೂಲಕ ಅಥವಾ **lekhaki2012@gmail.com / hl.pushpa62@gmail.com** ಇ-ಮೇಲ್ ಮೂಲಕ ಕಳುಹಿಸಬಹುದು.